ಪಾಶಣ್ಣ ಬೆಳಗ್ಗೆ ಎದ್ದವನೇ ಒಂದು ರೌಂಡು ಮನೆ ಎದುರಿನ ತೋಟದಲ್ಲಿ ಓಡಾಡಿಕೊಂಡು ಬರಲು ಹೊರಟ. ಅವನ ಮೂಲ ಹೆಸರು ಪರಮೇಶ್ವರ. ಆದರೆ, ಉದ್ದವಾದ ಅವನ ಆ ಹೆಸರು ಅನೇಕರಿಗೆ ಮರೆತೇಹೋಗಿದೆ. ಪಾಶಣ್ಣನ ಈಗಿನ ತಲೆಬಿಸಿ ಬೇರೆಯೇ. ಅವನು ತನ್ನ ತೋಟಕ್ಕೆ ಹೋಗದೆ 15 ದಿನಗಳೇ ಆಗಿದ್ದವು. ಕಡೆಮನೆ ಚಂದ್ರಣ್ಣನ ಮೊಮ್ಮಗನ ಉಪನಯನ, ಸುರಗಿಹಳ್ಳಿ ಕೃಷ್ಣಣ್ಣನ ಮಗಳ ಮದುವೆ ಅದೂ ಇದೂ ಅಂತ ಕುಂಡೆ ತುರಿಸಲೂ ಅವನಿಗೆ ಪುರುಸೊತ್ತಿಲ್ಲ. ಕಾಯಿಲೆ ಕಸಾಲೆ ಒಂದುಕಡೆ. ಅಮ್ಮನಿಗೆ ಸೊಂಟದ ಕಸ ಹಿಡಿದು, ಕೊಟ್ಟಿಗೆ ಕಡೆನೂ ತಾನೆ ಮಾಡಬೇಕಾದ ಪರಿಸ್ಥಿತಿ. 'ಒಟ್ನೂ ಹೇಳಿದರೆ ಸುಖ ಇಲ್ಲೆ. ಈ ಮಳೆ ಒಂದು ಯಾಕೆ ಸಾಯ್ತೋ? ಮಳೆ ಬೇಕು ಹೌದು, ಆದರೆ ಹಿಂಗಾ? ಬಂತು ಹೋತು ಅಂತಿಲ್ಲದೆ ವಾರಗಟ್ಲೆ ಸುರಿಯದೂ ಅಂದ್ರೆ? ಲೆಕ್ಕಾಚಾರ ಇಲ್ಲೆ. ಎನ್ನ ಜೀವನದಲ್ಲೇ ಕಾಣ್ಲೆ ಅಂತ ಸುಬ್ಬಜ್ಜನೇ ಹೇಳ್ತಾ ಅಂದರೆ? ಸುಬ್ಬಜ್ಜಂಗೆ 92 ವರ್ಷ ಅಂತೂ ಆಗಿಕ್ಕು. ಈ ಮಳೇಲಿ ಅಡಿಕೆಕಾಯಿ ಉಳೀತಾ? ನಾಲ್ಕು ಸಾರಿ ಕೊಳೆ ಔಷಧಿ ಹೊಡದ್ದೇನೋ ಹೌದು. ತುತ್ತ–ಸುಣ್ಣ ಔಷಧಿ ದುಡ್ಡು ಸ್ವಲ್ಪ ಆತಾ? ಇನ್ನು ಔಷಧಿ ಹೊಡೆಯೋನಿಗೆ ಒಂದು ಡ್ರಂಗೇ 1,000–1,100 ಕೊಡಕ್ಕು. ಅದೂ ಹೇಳಿದಾಗ ಅದರೂ ಬತ್ವಾ? ಅವ್ರು ಬಂದಾಗ ಹೊಡೆಸಕ್ಕು. ಅಡಿಕೆಕಾಯಿ ಉಳಿದ್ರಾದ್ರೂ ಕಾಣ್ತಿಲ್ಲೆ? ದುಡ್ಡೂ ಇಲ್ಲೆ ಹೊಗೆಸೊಪ್ಪೂ ಇಲ್ಲೆ ಅಂತ ಕತೆ ಆಯ್ದು. ಈ ವರ್ಷ ಹ್ಯಾಂಗೆ ಮಾಡಕ್ಕೇನೋ ಗೊತ್ತಿಲ್ಲೆ. ದೇವ್ರೇ ಕಾಯಕ್ಕು.' ಎಂದು ಅವನು ತನ್ನಷ್ಟಕ್ಕೆ ತಾನೇ ಗೊಣಗುತ್ತಾ ತೋಟ ಇಳಿದ. ಒಂದು ಕಾದಿಗೆ ಹಾರಿ, ಬಣ್ಣ ದಾಟುತ್ತಲೇ ಬೆಳೆದ ಅಡಿಕೆ ಸಸಿಯೊಂದು ಉರುಳಿ ಬಿದ್ದದ್ದು ಕಾಣಿಸಿತು. ಹತ್ತಿರಕ್ಕೆ ಹೋಗಿ ನೋಡಿದ, ಅಡಿಕೆ ಸಸಿ ಪೂರ್ಣ ಬುಡ ಜಗಿದು ಹಾಕಿವೆ. ಮುಂದೋ ಆಮುಂದೋ ಸಿಂಗಾರ ಬಿಡುವ ಅಡಿಕೆ ಸಸಿ; ಮತ್ತಷ್ಟು ಮುಂದೆ ಹೋದರೆ ಮತ್ತೊಂದು ಸಸಿ ಅಡ್ಡ ಬಿದ್ದಿದೆ. ಮತ್ತೆ ಮುಂದೆ ಹೋದರೆ ಮತ್ತೊಂದು. ಇದು ಕಾಡುಕೋಣವಲ್ಲ, ಹಂದಿಗುಡ್ಡದ್ದೇ ಕೆಲಸ. ಸಸಿ ಬುಡ ಜಗಿದು ಹಾಕಿವೆ. ಲೆಕ್ಕ ಮಾಡಿದರೆ 150 ಸಸಿಗಳು ಸತ್ತು ಬಿದ್ದಿವೆ. ಒಂದೇ ರಾತ್ರಿಯಲ್ಲಿ 150 ಸಸಿಗಳು ನಾಶವಾಗಿವೆ. ಕಣ್ಣು ಕತ್ತಲೆ ಗಟ್ಟಿದಂತಾಯಿತು, ಸ್ವಲ್ಪ ಹೊತ್ತು ಬಣ್ಣದಮೇಲೆ ಕೂತು ಸಾವರಿಸಿಕೊಂಡ. ಸ್ವಲ್ಪ ಹೊತ್ತು ಕೂತು ಎದ್ದು ಮನೆ ಕಡೆ ಹೊರಟ. ಮನೆಗೆ ಬರುವ ಹೊತ್ತಿಗೆ ಆಚೆಮನೆ ನಾಗಣ್ಣ ಬಂದು ಕುಳಿತಿದ್ದ.

ಅವನನ್ನು ಆಹ್ವಾನಿಸುತ್ತಾ, "ಬಾರಾ, ಕೂತ್ಕಳಾ. ಆಸರಿಗೆ ಬೇಕನಾ?" ಎಂದ ಪಾಶಣ್ಣ. "ಎಂಥಾ ಬೇಡಾ ಮಾರಾಯ. ನಮ್ಮನೇಲಿ ಇವತ್ತು ತಿಥಿ. ಮಧ್ಯಾಹ್ನ ಎಲ್ಲಾ ಬರ್ರಾ, ಹೇಳನಾ ಅಂತಬಂದಿ. ಬಂದು ಸುಮಾರು ಹೊತ್ತಾತು. ಎತ್ಲಾಗ ಹೋಯ್ದ್ಯಾ?" ಎಂದ ನಾಗಣ್ಣ.

"ತೋಟಕ್ಕೆ ಹೋಯ್ದನಾ. ಹಂದಿಗುಡ್ಡ ಬೈಂದ, ಮೊದಲೆಲ್ಲಾ. ಬಾಳೆಗಿಡ ತಿಂತಿದ್ದಾ. ಆಗ ಹಾಂಗಲ್ಲಾ. ಅಡಿಕೆ ಗಿಡಕ್ಕೇ ಕೈ ಕೊಟ್ಟಿದ್ದಾ. ಸಿಂಗಾರ ಬಿಡಾ ಹಾಂಗಿದ್ದಿದ್ದು. ಏನು ಮಾಡಕ್ಕು ಹೇಳು." ಎನ್ನುತ್ತಾ ಹೆಂಡತಿಯನ್ನು ಕರೆದು ಕಾಫಿತರಲು ಹೇಳಿದ. ಹೆಂಡತಿ ಪಾರ್ವತಿ ಕಾಫಿ ತಂದುಕೊಟ್ಟಳು.

ಕಾಫಿ ಕುಡಿಯುತ್ತಾ ನಾಗಣ್ಣ, "ನಮ್ ತೋಟದಲ್ಲೂ ಮೂರೋ ನಾಲ್ಕೋ ಸಸಿ ಹೋಯ್ದು, ಅದ ಲೆಕ್ಕ ಅಲ್ಲಾ ಬಿಡು. ನಿಂದು 150 ಸಸಿ ಹೋಯ್ದು ಅಂಬೆ. ಸುಮ್ನೆ ಬಿಡಲ್ ಬತ್ತನಾ? ತಡಿ ಒಂದು ಕವಳ ಹಾಕ್ಕಿತ್ತಿ" ಎನ್ನುತ್ತಾ ಬಿಟ್ಟಿ ಸಲಹೆ ಕೊಡಲು ತಯಾರಿ ನಡೆಸಿದ.

ಪಾಶಣ್ಣ ಅಡಿಕೆ ಶಿಬ್ಲು ತಂದುಕೊಡುತ್ತಿದ್ದಂತೆ, ಅಡಿಕೆ ಕತ್ತರಿ ತೆಗೆದುಕೊಂಡು ಕತ್ತರಿಸಿ ಬಾಯಿಗೆ ಹಾಕಿಕೊಂಡ. ಪಾಶಣ್ಣ ವಿನೀತನಾಗಿ, "ಏನು ಮಾಡಕ್ಕು ಹೇಳು, ಈಗ ನಾನು ಏನು ಮಾಡಕ್ಕು ಹೇಳು" ಎನ್ನುತ್ತಿದ್ದಂತೆ ನಾಗಣ್ಣ ಪ್ಲಾನು ಹೇಳಿಕೊಡತೊಡಗಿದ. "ಹಂದಿ, ಗಮಯ, ಕಾಡುಕೋಣ ಇವೆಲ್ಲ ಫಾರೆಸ್ಟನೋರಿಗೆ ಸೇರಿದ್ದು. ಫಾರೆಸ್ಟರ್ ಈಗ ಒಳ್ಳೆಯವರಿದ್ದಾರೆ. ಚನ್ನಪ್ಪ ಅಂತ. ಅವರಿಗೆ ದೂರು ಕೊಟ್ಟರೆ ಪರಿಹಾರದ ಹಣ ಕೊಡ್ತಾ, ಚೌಕದಲ್ಲಿ ಫಾರೆಸ್ಟರ್ ಆಫೀಸ್ ಇದೆ; ಅಲ್ಲಿಗೆ ಹೋಗಿ